# ಡಾ. ಸಿದ್ಧಯ್ಯ ಪುರಾಣಿಕರ
# ಆಯ್ದ ಮಕ್ಕಳ ಕವನ

## ೧. ನನ್ನ ಕುದುರೆ

ಅಜ್ಜನ ಕೋಲಿದು ನನ್ನಯ ಕುದುರೆ
ಹೆಜ್ಜೆಗೆ ಹೆಜ್ಜೆಗೆ ಕುಣಿಯುವ ಕುದುರೆ ॥

ಕಾಲಿಲ್ಲದೆಯೇ ನಡೆಯುವ ಕುದುರೆ
ಕೂಳಿಲ್ಲದೆಯೇ ಬದುಕುವ ಕುದುರೆ
ನಾಲನು ಬಡಿಸದ ಜೂಲವ ಹೊದಿಸದ
ಲಾಲನೆ ಪಾಲನೆ ಬಯಸದ ಕುದುರೆ
ಅಜ್ಜನ ಕೋಲಿದು ನನ್ನಯ ಕುದುರೆ ॥

ಚಂದಪ್ಪನಿಗೆ ಚಿಗರಿಯೆ ಕುದುರೆ
ಮಾದೇವನಿಗೆ ನಂದಿಯೆ ಕುದುರೆ
ರಾಮಚಂದ್ರನಿಗೆ ಹನುಮನೆ ಕುದುರೆ
ಹೊಟ್ಟೆಯ ಗಣಪಗೆ ಇಲಿಯೇ ಕುದುರೆ
ಅಜ್ಜನ ಕೋಲಿದು ನನ್ನಯ ಕುದುರೆ ॥

ನಿಂತರೆ ನಿಲ್ಲುವ ಒಳ್ಳೆಯ ಕುದುರೆ
ಓಡಿದರೋಡುವ ನನ್ನಿಯ ಕುದುರೆ
ಕಾಡದ ಬೇಡದ ಕರುಳಿನ ಕುದುರೆ
ನೋಡಲು ಬಿಡದಿಹ ಬೆತ್ತದ ಕುದುರೆ
ಅಜ್ಜನ ಕೋಲಿದು ನನ್ನಯ ಕುದುರೆ ॥

ಅರಬರ ದೇಶದಿ ದೊರೆಯದ ಕುದುರೆ
ಕಾಠೇವಾಡದಿ ಕಾಣದ ಕುದುರೆ

ಅರಸು ಮಕ್ಕಳಿಗು ಸಿಕ್ಕದ ಕುದುರೆ
ನನಗೇ ಸಿಕ್ಕಿದೆ ನನ್ನೀ ಕುದುರೆ
ಅಜ್ಜನ ಕೋಲಿದು ನನ್ನಯ ಕುದುರೆ

## ೨. ನೀನು ನಕ್ಕು ಜಗವ ನಗಿಸು

ನೀನು ನಕ್ಕು ಜಗವ ನಗಿಸು
ನಕ್ಕು ಮುಖವು ಅರಳಲಿ
ಮೋರೆ ಗಂಟು ಹಾಕುವಂಥ
ಚಾಳಿ ದೂರ ತೆರಳಲಿ

ನೀನು ನಗಲು ನಿನ್ನ ಕೂಡ
ಎಲ್ಲ ಜನರು ನಗುವರು
ನಿನ್ನ ಜೊತೆಗೆ ಅಳಲು ಮಾತ್ರ
ಯಾರೊಬ್ಬರು ದೊರೆಯರು

ಸೃಷ್ಟಿಯಲ್ಲಿ ಸರ್ವವೂ
ನಗುತಲಿಹವು ಗೆಳೆಯನೆ
ಹೂವು ಹಕ್ಕಿ ಚಂದ್ರ ಚಿಕ್ಕೆ
ನಗುವುವೆಲ್ಲ ಕೆಳೆಯನೆ

ನಕ್ಕು ನಲಿದು ಹಾಡಿ ಕೆಲೆದು
ಹಿಗ್ಗಿನೊಡನೆ ಬಾಳಲು
ಕಲಿಯಬೇಕು ಗೆಳೆಯ ಕಷ್ಟ–
ನಷ್ಟಗಳನು ತಾಳಲು

ನಗೆಮಲ್ಲಿಗೆ ಬಾಡದಿರಲಿ
ಮೊಗದ ಮೇಲೆ ಸೋದರ
ನಗುವ ಮೊಗವೆ ಜಗದ ಜನದಿ
ಹೆಚ್ಚಿಸುವುದು ಆದರ



## ೩. ಬಣ್ಣ ಬಣ್ಣದ ಓಕುಳಿ

ಹೋಳಿ ಬಂದಿತು ಹೋಳಿ
ಮಾಡಿ ಹಿಗ್ಗಿನ ದಾಳಿ
ಆಡಬನ್ನಿರಿ ಓಕುಳಿ
ಬಣ್ಣ ಬಣ್ಣದ ಓಕುಳಿ!

ಮೈಗೆ ಮನಸಿಗೆ ಕಚಕುಳಿ
ಹೆಣ್ಣು ಗಂಡಿಗೆ ಹೊಂಪುಳಿ
ಹೋಳಿ ಹಾಡಿನ ಒಬ್ಬುಳಿ
ಬಣ್ಣ ಬಣ್ಣದ ಓಕುಳಿ!

ಕೊಡಿರಿ ಕೈಗೆ ಜೀಕಳಿ
ರಸಿಕನಾಗುವ ಕೇವಲಿ
ಸಲ್ಲಿಸುವ ವರ್ಣಾಂಜಲಿ
ಬಣ್ಣ ಬಣ್ಣದ ಓಕುಳಿ!

ಜನಕೆ ಬಣ್ಣದ ಬಾಕುಳಿ
ಅಂತೆ ಹೋಳಿಯ ಓಕುಳಿ
ನೀರಸತೆಯನಿದು ನೂಕಲಿ
ಬಣ್ಣ ಬಣ್ಣದ ಓಕುಳಿ!

## ೪. ಹಣ್ಣು ಮಾರುವವನ ಹಾಡು

ನಂಜನಗೂಡಿನ ರಸಬಾಳೆ
ತಂದಿಹೆ ಕೊಡಗಿನ ಕಿತ್ತಳೆ
ಬೀದರ ಜಿಲ್ಲೆಯ ಸೀಬೆಯ ಹಣ್ಣು
ಬೆಂಗಳೂರಿನ ಸೇಬಿನ ಹಣ್ಣು
ಕೊಳ್ಳಿರಿ ಹಿಗ್ಗನು ಹರಿಸುವವು
ಕಲ್ಲು ಸಕ್ಕರೆಯ ಮರೆಸುವವು ॥

ಕೊಳ್ಳಿರಿ ಮಧುಗಿರಿ ದಾಳಿಂಬೆ
ಬೆಳವಲ ಬಯಲಿನ ಸಿಹಿಲಿಂಬೆ

ಬೆಳಗಾವಿಯ ಸವಿ ಸಪ್ಪೋಟ
ದೇವನಹಳ್ಳಿಯ ಚಕ್ಕೋತ
ನಾಲಿಗೆ ಬರವನು ಕಳೆಯುವವು
ದೇಹದ ಬಲವನು ಬೆಳೆಸುವವು ॥

ಗಂಜಾಮ್ ಅಂಜೀರ್ ತುಮಕೂರ್ ಹಲಸು
ಧಾರವಾಡದ ಅಪೂಸು
ಮಲೆನಾಡಿನ ಅನಾನ್ನಸು
ಕೊಳ್ಳಿರಿ ಮರೆತು ಸಿಹಿ ತಿನಿಸು
ಸವಿಯಿರಿ ಬಗೆ ಬಗೆ ಹಣ್ಣುಗಳ
ಕನ್ನಡನಾಡಿನ ಹಣ್ಣುಗಳ!

## ೫. ಕನ್ನಡಿಗರಾಗಿ ಬೆಳೆಯೋಣ

ಕನ್ನಡಿಗರಾಗಿ ಬೆಳೆಯೋಣ
ಕನ್ನಡಿಗರಾಗಿ ಉಳಿಯೋಣ
ಕನ್ನಡ ತೇಜದಿ ಹೊಳೆಯೋಣ
ಕನ್ನಡ ತೇರನು ಎಳೆಯೋಣ

ನಾವು ಹುಟ್ಟಿರುವ ಕುಲವೇನಿರಲಿ
ಕನ್ನಡ ಕುಲವನೆ ಅಪ್ಪೋಣ
ಕನ್ನಡ ನಾಡೊಳಗಿರುವವರೆಲ್ಲ
ಕನ್ನಡಿಗರೆಂದು ಒಪ್ಪೋಣ

ವೇಷವು ಬೇರೆ ಭೂಷಣ ಬೇರೆ
ಭಾಷೆಯು ಒಂದೇ–ಕನ್ನಡವು
ಕನಸಿನೊಳಿಹುದೂ ಮನಸಿನೊಳಿಹುದೂ
ನನಸಿನೊಳಿಹುದೂ ಕನ್ನಡವು

ಮನೆಯೊಳು, ಮಠದೊಳು, ಮಸೀದೆ, ಚರ್ಚಿನೊಳು
ಕನ್ನಡಿಗರಾಗಿಯೇ ಬಾಳೋಣ



ಒಬ್ಬರೊಬ್ಬರ ಹಬ್ಬ ಉತ್ಸವದಿ
ಸೇರುತ ಹರುಷವ ತಾಳೋಣ

ಕನ್ನಡ ಕುಲವನು ಒಡೆಯುವ ಯಾರನು
ನಂಬದೆ ನಮ್ಮನೆ ನಂಬೋಣ
ಕನ್ನಡದೇಳ್ಗೆಗೆ ದುಡಿಯದವರನು
ಮರಹಿನ ಕಣಜದಿ ತುಂಬೋಣ

ಕನ್ನಡ ಕಲಿಸದ ವಿದ್ಯಾಲಯಗಳೆ
ಕನ್ನಡ ಬಳಸದ ಸರಕಾರ
ಕನ್ನಡ ತೀರ್ಪನು ಕೊಡದ ಕೋರ್ಟುಗಳೆ
ನಿಮಗಿದೊ ನಮ್ಮಯ ಧಿಕ್ಕಾರ

ಕನ್ನಡ ಭಕ್ತರು ಯಾರೇ ಇರಲಿ
ಅವರಿಗೆ ನಮ್ಮಯ ಸತ್ಕಾರ
ಕನ್ನಡ ಪ್ರೇಮಿಗಳೆಲ್ಲಿಯೆ ಇರಲಿ
ಅವರಿಗೆ ನಮ್ಮ ನಮಸ್ಕಾರ

ಕನ್ನಡಿಗರಾಗಿ ಬೆಳೆಯೋಣ
ಕನ್ನಡಿಗರಾಗಿ ಉಳಿಯೋಣ
ಕನ್ನಡ ತೇಜದಿ ಹೊಳೆಯೋಣ
ಕನ್ನಡ ತೇರನು ಎಳೆಯೋಣ

## ೬. ಭರತಭೂಮಿ ಕರುನಾಡು

ಭರತ ಭೂಮಿಯನುಳಿದು
ಕರುನಾಡು ಇಲ್ಲ

ಕರ್ನಾಟಕವ ಬಿಟ್ಟು
ಭಾರತವು ಇಲ್ಲ!

ನಮ್ಮ ತಾಯಿಯ ತಾಯಿ
ಭಾರತಾಂಬೆ

ಭಾರತಿಗೆ ಭೂಷಣಳು
ಕರ್ನಾಟಕಾಂಬೆ

ಸಂಕ್ಷಿಪ್ತ ಬ್ರಹ್ಮಾಂಡ
ಭಾರತದ ಭೂಮಿ

ಸಂಕ್ಷಿಪ್ತ ಭಾರತವು
ಕನ್ನಡದ ಭೂಮಿ

ಏನುಂಟು ಏನಿಲ್ಲ
ಕನ್ನಡದ ನೆಲದಿ?

ಹುಟ್ಟಿಹರು ಶ್ರೇಷ್ಠರು
ಕನ್ನಡದ ಕುಲದಿ

ಸಕಲ ಭುವಿಗೇ ಬೆಳಕು
ಭಾರತದ ಕತದಿಂದ

ಸಾರ್ಥಕವೆ ಭಾರತಕೆ
ಕರುನಾಡಿನಿಂದ

ಜಯವೆನ್ನಿ ಭಾರತಕೆ
ಕರ್ನಾಟಕಕ್ಕೆ

ಈ ಎರಡು ಶುಭಕರವು
ಸಕಲ ಲೋಕಕ್ಕೆ

## ೭. ಮಕ್ಕಳ ಹಕ್ಕು

ಎಲ್ಲರ ಅಕ್ಕರೆ
ಒಲವಿನ ಸಕ್ಕರೆ
ಇವು ಮಕ್ಕಳ ಹಕ್ಕು

ಎಲ್ಲರ ಕಾಳಜಿ
ಎಲ್ಲರ ಮುಲಾಜಿ
ಇವು ಮಕ್ಕಳ ಹಕ್ಕು



ವಿಶೇಷ ರಕ್ಷಣೆ
ವಿಶೇಷ ಪೋಷಣೆ
ಇವು ಮಕ್ಕಳ ಹಕ್ಕು

ಒಳ್ಳೆಯ ಉಣಿಸು
ಪೌಷ್ಟಿಕ ತಿನಿಸು
ಇವು ಮಕ್ಕಳ ಹಕ್ಕು

ಒಳ್ಳೆಯ ಉಡುಗೆ
ಒಳ್ಳೆಯ ತೊಡಿಗೆ
ಇವು ಮಕ್ಕಳ ಹಕ್ಕು

ಒಳ್ಳೆಯ ಬೆಳವು
ಒಳ್ಳೆಯ ತಿಳಿವು
ಇವು ಮಕ್ಕಳ ಹಕ್ಕು

ಚೊಕ್ಕ ವಿದ್ಯೆಯು
ಮಕ್ಕಳ ವಾಙ್ಮಯ
ಇವು ಮಕ್ಕಳ ಹಕ್ಕು

ತಕ್ಕ ಪರಿಸರ
ತಕ್ಕ ಪರಿಕರ
ಇವು ಮಕ್ಕಳ ಹಕ್ಕು

ಆಟ ಪಾಟಗಳು
ನೋಟ ಕೂಟಗಳು
ಇವು ಮಕ್ಕಳ ಹಕ್ಕು

ಪ್ರೀತಿಯ ಕವಚ
ನೀತಿಯ ಕುಂಡಲ
ಇವು ಮಕ್ಕಳ ಹಕ್ಕು

ಯೋಜನೆಗಳಲಿ
ಮೊದಲ ಕಳಕಳಿ
ಇದು ಮಕ್ಕಳ ಹಕ್ಕು

ಎಲ್ಲೆಡೆಗಳಲ್ಲಿ
ಮೊದಲ ಆವಲಿ
ಇದು ಮಕ್ಕಳ ಹಕ್ಕು

ಹಿರಿಯರೆ ಕೇಳಿ
ಮರೆತರೆ ನೀವು
ಮಕ್ಕಳ ಈ ಹಕ್ಕು

ಆಗುತ ಮುಕ್ಕು
ನಿಮ್ಮಯ ಬದುಕು
ಹಿಡಿವುದು ಬಲು ತುಕ್ಕು

## ೮. ಕಲಿಯಿರಿ!

ವೀಣೆ ನುಡಿಸಲು ಕಲಿಯಿರಿ
ಕೊಳಲನೂದಲು ಕಲಿಯಿರಿ
ಅದರ ದನಿಗೆ
ದನಿಯ ಸೇರಿಸಿ

ಕವನ ಹಾಡಲು ಕಲಿಯಿರಿ!
ಹಾಡಿ ಕುಣಿಯಲು ಕಲಿಯಿರಿ
ಕುಣಿದು ಕೊನೆಯಲು ಕಲಿಯಿರಿ
ಕುಣಿತದೊಡನೆ
ಸಪುರ ಮೈಯನು

ಗಳಿಸಿ ಬೆಳೆಯಲು ಕಲಿಯಿರಿ!
ನಟಿಸಿ ನಾಟಕ ಕಲಿಯಿರಿ
ಪಠಿಸಿ ವಿದ್ಯೆಯ ಕಲಿಯಿರಿ
ಎಂಥ ಬಿರಿಯೇ
ಬಂದರೂ ಸಹ

ದಿಟವನಾಡಲು ಕಲಿಯಿರಿ!
ಕೂಡಿ ನಡೆಯಲು ಕಲಿಯಿರಿ



ಕೂಡಿ ದುಡಿಯಲು ಕಲಿಯಿರಿ
ಕೂಡು ಬಾಳಿನ
ಗಾಡಿ ಬೀರಲು

ಕೂಡಿ ಪಡೆಯಲು ಕಲಿಯಿರಿ!
ತಾಯಿ ನುಡಿಯನು ಕಲಿಯಿರಿ
ತಾಯಿನಾಡನು ಒಲಿಯಿರಿ
ತಾಯಿನಾಡನು
ಸ್ವರ್ಗಮಾಡುವ
ಮೋಡಿಯನ್ನೂ ಕಲಿಯಿರಿ!

## ೯. ಮಗುವಿನ ಮೊರೆ

ಹೆಂಡದ ಅಂಗಡಿ ಹಾಳಾಗಿ ಹೋಗಿ
ಹಾಲಿನ ಅಂಗಡಿ ಬರಲಮ್ಮ

ಕರಿದದ್ದನ್ನೇ ಮಾರುವರಿನ್ನು
ಹಣ್ಣು ಹಂಪಲವ ತರಲಮ್ಮ

ಜೂಜು ಜಿದ್ದುಗಳ ಗದ್ದಲ ಅಡಗಿ
ಆಟ ಪಾಟಗಳು ಬರಲಮ್ಮ

ಕೊಲೆಯು ಸುಲಿಗೆಗಳು ಹುಲ್ಲನು ಕಚ್ಚಿ
ಸೈಪಿನ ಸುಗ್ಗಿಯ ತರಲಮ್ಮ

ಭಾಷಣ ಬಿಗಿಯುವ ಚಪಲವು ಹೋಗಿ
ದೇಶ ಬೆಳೆಸುವುದು ಬರಲಮ್ಮ

ಹರಿದು ತಿನ್ನುವುದು ಮಣ್ಣನು ಮುಕ್ಕಿ
ಹಂಚಿ ಉಣ್ಣುವುದು ಬರಲಮ್ಮ

‘ನಾನು’ ಎನ್ನುವ ಹಮ್ಮು ಕರಗುತ
‘ನಾವು’ ಎನ್ನುವುದು ಬರಲಮ್ಮ

ಬಿಡಿ ಬಿಡಿಯಾಗಿ ಬದುಕುವ ಬದಲು
ಇಡಿಯಾಗಿರುವುದ ತರಲಮ್ಮ
ಮಕ್ಕಳ ಬಗ್ಗೆ ಅಲಕ್ಷ್ಯ ಹೋಗಿ
ಅಕ್ಕರೆ ಸಕ್ಕರೆ ಬರಲಮ್ಮ
ಮಕ್ಕಳ ನಾಟಕ ಮಕ್ಕಳ ಚಿತ್ರ
ಮಕ್ಕಳ ಪದ್ಯ ತರಲಮ್ಮ
ಮಗುವಿನ ಮೊರೆಯಿದು ಬರಿ ಉಸಿರಾಗದೆ
ಮಗುವಿನ ಯುಗವನು ತರಲಮ್ಮ
ನಾಡಿನ ಬಾನಿನ ಚಿಕ್ಕೆಗಳಂದದಿ
ಮಕ್ಕಳು ಹೊಳೆವುದು ಬರಲಮ್ಮ

## ೧೦. ಭಾರತವೆಲ್ಲಕೆ ಬಾವುಟವೊಂದೇ!

ಭಾರತವೆಲ್ಲಕೆ ಬಾವುಟವೊಂದೇ
ಸಂವಿಧಾನವೊಂದೇ
ಒಂದೇ ಎಲ್ಲರ ಸ್ಥಾನಮಾನಗಳು
ರಕ್ಷಣೆ ಎಲ್ಲರಿಗೊಂದೇ
ಅರ್ಪಿಸಿಕೊಂಡಿಹೆವೀ ಘಟನೆಯನು
ನಾವೆ ನಿಜದಿ ನಮಗೆ
ಸಮಾನ ಸಂಧಿಯ ಸಮಾನ ನ್ಯಾಯವ
ಕೈಗೂಡಿಸಲೆಲ್ಲರಿಗೆ
ಹಲವು ಭಾಷೆಗಳ ಹಲವು ಧರ್ಮಗಳ
ಭಾರತೀಯರೆಲ್ಲರಿಗೆ
ಧಾರ್ಮಿಕ ಲೌಕಿಕ ಸಾಂಘಿಕ ಬೌದ್ಧಿಕ
ಸ್ವಾತಂತ್ರ್ಯವು ಸರ್ವರಿಗೆ
ಸರ್ವರ ಹಿತದಲಿ ಓರ್ವನ ಹಿತವು
ಸರ್ವರು ಸರ್ವರಿಗಾಗಿ
ಒಬ್ಬನ ಕಷ್ಟವು ಎಲ್ಲರನಿಷ್ಟವು



ದೇಶವು ಸರ್ವರಿಗಾಗಿ
ಭಾರತ ಬಾವುಟದಡಿಯಲಿ ದುಡಿಯುವ
ಎಲ್ಲರ ಹಿತಕಾಗಿ
ಬಾವುಟ ರಕ್ಷಿಸಿ, ರಕ್ಷಿಪುದೆಮ್ಮನು
ಪ್ರಗತಿಯ ಪಥಕಾಗಿ

●●